ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue 3, November-December 2024, Pp. 54-65
©*IIMRD*, Mysuru
www.iimrd.com

# ಶಿವಮೊಗ್ಗ ಜಿಲ್ಲೆಯ ಶಾಸನಗಳಲ್ಲಿ ವೈಷ್ಣವ ಪಂಥದ ಪ್ರಾಚೀನತೆ

**ಕರ್ಣ ಎಸ್[1] ಮತ್ತು ಪ್ರೊ. ಸರ್ವಮಂಗಳ ಜಿ[2]**
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು,
ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ಹಾಗೂ ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ.

**ಸಾರಾಂಶ: (Abstract)**

*ವೈವಿಧ್ಯಮಯವಾದ ದೇಶವಾದ ಭಾರತದಲ್ಲಿನ ವಿವಿಧ ಜನಾಂಗಗಳೂ, ವಿವಿಧ ಸಂಸ್ಕೃತಿಗಳೂ, ವಿವಿಧ ಪ್ರಾಕೃತಿಕ ಸನ್ನಿವೇಶಗಳೂ, ವಿವಿಧ ಧರ್ಮಗಳೂ ನೆಲೆಯೂರಿವೆ. ಈ ದೇಶದ ಜನರ ಬದುಕು ಧರ್ಮಮೂಲದ್ದಾಗಿದೆ. ಇಲ್ಲಿ ವಿವಿಧ ಪ್ರಖ್ಯಾತ ಧರ್ಮಗಳು ಅಸ್ಥಿತ್ವಗೊಂಡು ಬೆಳವಣಿಗೆಯಾಗಿವೆ. ಅವುಗಳಲ್ಲಿ ಹಿಂದೂ, ಬೌದ್ಧ, ಜೈನ, ಸಿಖ್ ಮುಂತಾದವುಗಳು. ವೇದಗಳು ನಮಗೆ ಪ್ರಾಚೀನ ಭಾರತದ ಧಾರ್ಮಿಕ ಜೀವನದ ಕುರಿತು ದಾಖಲೆಗಳನ್ನು ಒದಗಿಸುತ್ತವೆ.*

**ಮುಖ್ಯಪದಗಳು (Keywords):** ಶಾಸನಗಳು, ವೈಷ್ಣವ ಪಂಥ, ಋಗ್ವೇದ, ಹರಿದಾಸ ಸಾಹಿತ್ಯ, ಶಿವಮೊಗ್ಗ ಜಿಲ್ಲೆ

## ಪೀಠಿಕೆ

ಆರಂಭಿಕ ವೇದವಾದ ಋಗ್ವೇದದಲ್ಲಿ ಅನೇಕ ದೇವತೆಗಳ ಉಲ್ಲೇಖಗಳಿವೆ, ಆ ದೇವತೆಗಳ ಲಕ್ಷಣಗಳ ಆಧಾರದಲ್ಲಿ ಆ ದೇವತೆಗಳ ಆರಾಧನೆಯು ಪ್ರಾಕೃತಿಕ ಪೂಜೆಯನ್ನು ಪ್ರತಿನಿಧಿಸುತ್ತದ್ದವು. ವೈಧಿಕ ಸಾಹಿತ್ಯದಲ್ಲಿ ಕಂಡುಬಂದಿರುವ ದೇವತೆಗಳಲ್ಲಿ ವಿಷ್ಣುವಿನ ಬಗ್ಗೆಯೂ ಉಲ್ಲೇಖವಿದೆ. ಇದಕ್ಕೆ ಪೂರಕವೆಂಬಂತೆ ಶತಪಥ ಬ್ರಾಹ್ಮಣದಲ್ಲಿರುವ ಒಂದು ಕಥೆ ಹೀಗಿದೆ; ದೇವತೆಗಳ ಚಾತುರ್ಯದಿಂದ ವಿಷ್ಣುವಿನ ತಲೆಯನ್ನು ಆತನ ಶರೀರದಿಂದ ಕತ್ತರಿಸಲಾಯಿತು, ಅದೇ ಆದಿತ್ಯ, ಎಂದರೆ ಸೂರ್ಯನಾಯಿತು. ಅಲ್ಲದೆ ಆದಿತ್ಯ ಎಂಬ ಶಬ್ದವು ಅನಂತವಾದ ಆಕಾಶದ ಮೂರ್ತಿ ಸ್ತ್ರೀರೂಪಿ ದೇವತೆಯಾದ ಆದಿತಿ ಎಂಬ ಹೆಸರಿನಿಂದ ಬಂದಿದ್ದಾಗಿದೆ. ಆದಿತ್ಯವು ಸೂರ್ಯನನ್ನೂ ಹಾಗೂ ಸೂರ್ಯ ಮತ್ತು ಆಕಾಶಗಳಿಗೆ ಸಂಬಂಧಿಸಿದಂತೆ ಒಂದು ದೇವತಾ ಸಮೂಹವನ್ನು ನಿರ್ದೇಶಿಸುತ್ತದೆ.[1] ಪ್ರಕೃತಿಯ ಆರಾಧನೆಯಲ್ಲಿ ತೊಡಗಿದ ಮಾನವನು ಕಾಲಾನುಕ್ರಮದಲ್ಲಿ ದೇವತೆಯ ಮೂರ್ತಿಗಳ ಆರಾಧನೆಯಲ್ಲಿ ತೊಡಗಿದನು. ಅಲ್ಲದೆ ವಿಷ್ಣುವನ್ನು ಸೂರ್ಯನ ಅಭಿವ್ಯಕ್ತಿ ರೂಪಗಳಲ್ಲಿ ಒಂದು ಎಂಬುದಾಗಿ ಗ್ರಹಿಸಿಕೊಂಡು, ಆತನು ಶಿಪಿವಿಷ್ಟ ಎಂದರೆ ಜ್ಯೋತಿ ರಶ್ಮಿಗಳಿಂದ ಮುಚ್ಚಲ್ಪಟ್ಟವನು ಮತ್ತು ಆತನ ದೊಡ್ಡತನವು ಅಗ್ರಾಹವಾದುದ[5] ಎನ್ನಲಾಗಿದೆ.

*Please cite this article as:* ಕರ್ಣ ಎಸ್. ಮತ್ತು ಸರ್ವಮಂಗಳ ಜಿ. (2024). ಶಿವಮೊಗ್ಗ ಜಿಲ್ಲೆಯ ಶಾಸನಗಳಲ್ಲಿ ವೈಷ್ಣವ ಪಂಥದ ಪ್ರಾಚೀನತೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(3). ಪು.ಸಂ.* 54–65

ಮಾನವನು ಪ್ರಕೃತಿಯ ಆರಾಧನೆಯ ಮೂಲಕ ಸ್ಥಿತ್ಯಂತರಿಸಿ ಮೂರ್ತಿ ಪೂಜೆಯಲ್ಲಿ ತೊಡಗಿಸಿಕೊಂಡು ಒಂದೊಂದು ದೇವಾನುದೇವತೆಯನ್ನು ಆರಾಧಿಸತೊಡಗಿದ. ಒಂದೊಂದು ದೇವತೆಗೆ ಒಂದೊಂದು ಗುಂಪು, ಪಂಗಡವಾಗಿ ಅಥವಾ ಪಂಥವಾಗಿ ತನ್ನದೇ ಆದ ವಿಶಿಷ್ಟತೆಯನ್ನು ಕಾಯ್ದುಕೊಳ್ಳತೊಡಗಿದನು. ಹೀಗೆ ವಿಷ್ಣುವಿನ ಆರಾಧನೆ ಮಾಡುವ ವೈಷ್ಣವ ಪಂಥವು ಹಿಂದೂ ಧರ್ಮದ ಒಂದು ಶಾಖೆಯಾಗಿ ಬೆಳವಣಿಗೆಯಾಯಿತು. ಆದರೆ ಈ ಪಂಥದ ಸ್ಥಾಪನೆ ಮತ್ತು ಸ್ಥಾಪಕರ ಸಂಗತಿಯು ಸಂದಿಗ್ಧವಾಗಿದೆ. ಲಭ್ತಯವಿರುವ ಶಾಸನ ಆಧಾರದ ಮೇಲೆ ಭಾರತದಲ್ಲಿ ಈ ಧರ್ಮದ ಪ್ರಾಚೀನತೆಯನ್ನು ಈ ಲೇಖನದಲ್ಲಿ ವಿಶ್ಲೇಶಿಸಲಾಗಿದೆ.

**ಶಾಸನಾಧಾರಗಳು**

ಲಭ್ಯವಿರುವ ಶಾಸನಗಳನ್ನಾಧಿರಿಸಿ ವೈಷ್ಣವ ಪಂಥಕ್ಕೆ ಸಂಬಂಧಿಸಿದಂತೆ ಇಲ್ಲಿ ವಿವರಿಸಲಾಗಿದೆ.

**ಬೆಸ್ನಾಗರ್‌ನ ಗರುಡ ಗಂಬದ ಶಾಸನಗಳು**

ಪ್ರಸ್ತುತ ಮಧ್ಯಪ್ರದೇಶದ ಗ್ವಾಲಿಯರ್ ಪ್ರಾಂತ್ಯದ ಭಿಲ್ಸಾ ನಗರದ ಬಳಿ ಇರುವ ಬೆಸ್ನಾಗರ್‌ನಲ್ಲಿ ಶಾಸನಗಳು ವೈಷ್ಣವ ಸ್ಮಾರಕಗಳಲ್ಲಿ ಅತ್ಯಂತ ಪ್ರಾಚೀನವಾದುದಾಗಿದೆ. ಇವು ಎರಡು ಗರುಡ ಧ್ವಜಶಾಸನಗಳಾಗಿವೆ. ಈ ಶಾಸನ ಎರಡು ಭಾಗಗಳಾಗಿ ಕೆತ್ತಲ್ಪಟ್ಟಿದೆ”[6 &7]

ಈ ಶಾಸನಗಳ ಕಾಲ ಸುಮಾರು ಸಾ.ಶ.ಪೂರ್ವ ಎರಡನೇ ಶತಮಾನದ ಕೊನೆಯ ಭಾಗವೆಂದು ವಿದ್ವಾಂಸರ ಅಭಿಪ್ರಾಯ. ಅಂದರೆ ಈ ಕಾಲಕ್ಕಾಗಲೇ ವೈಷ್ಣವ ಧರ್ಮವು ಪ್ರವರ್ಧನಗೊಂಡು ಪ್ರಚಾರದಲ್ಲಿತ್ತೆಂದೂ ಹಾಗೂ ವಿಷ್ಣುವಿನ ಅನೇಕ ದೇವಾಲಯಗಳು ಸ್ಥಾಪನೆಗೊಂಡು ಪೂಜಾರ್ಹವಾಗಿದ್ದವೆಂದೂ ಈ ಶಾಸನದಿಂದ ತಿಳಿದುಬರುತ್ತದೆ.

**ಘೋಸುಂಡಿಯ ಶಿಲಾಸ್ತಂಭ ಶಾಸನ**

ರಾಜಾಸ್ತಾನ (ರಜಪುತಾಣ)ದ ಘೋಸುಂಡಿ ಎಂಬ ಊರಿನಲ್ಲಿ ಈ ಶಾಸನವು ದೊರೆತಿದೆ. ಇದರ ಕಾಲಮಾನವು ಸುಮಾರು ಸಾ.ಶ.ಪೂರ್ವ ಎರಡನೇ ಶತಮಾನ. ಈ ಶಾಸನವು ಬ್ರಾಹ್ಮೀ ಲಿಪಿಯಲ್ಲಿದೆ.[9]

ಈ ಶಾಸನವು ಭಾಗವತ ಅಥವಾ ಪಂಚರಾತ್ರ ಪದ್ಧತಿಯಲ್ಲಿ ಕಾಣಬರುವ ವ್ಯೂಹಪದ್ಧತಿ ಪರಂಪರೆಯ ಪ್ರಾಚೀನತೆಗೆ ದಾಖಲೆಯಂತಿದೆ. ವಿಭಿನ್ನ ಸಂಪ್ರದಾಯ ಅಥವಾ ಪಂಥಗಳಿಗೆ ಸೇರಿದ ಪ್ರಮುಖ ದೇವ–ದೇವತೆಗಳನ್ನು ಏಕಕಾಲದಲ್ಲಿ–ಏಕಸ್ಥಾನದಲ್ಲಿ ಪೂಜಿಸುತ್ತಿದ್ದ ಸಾಮರಸ್ಯ ಪದ್ಧತಿಗೆ ಈ ಶಾಸನ ಉತ್ತಮವಾದ ಸಾಕ್ಷಿಯಾಗಿದೆ.

**ನಾನ್‌ಘಾಟ್‌ನ ಗುಹಾಶಾಸನ**

ಸಾ.ಶ.ಪೂರ್ವ ಎರಡನೇ ಶತಮಾನದ ಕೊನೆಯ ಭಾಗಕ್ಕೆ ಸೇರಿದ ಈ ಶಾಸನ[10] ಮಹಾರಾಷ್ಟ್ರದ ನಾನ್‌ಘಾಟ್ ಗುಹೆಯಲ್ಲಿ ದೊರೆತಿದೆ. ಈ ಗುಹಾಶಾಸನದಲ್ಲಿ ಚಂದ್ರವಂಶದವರಾದ ಸಂಕರ್ಷಣ ಮತ್ತು ವಾಸುದೇವರನ್ನು ಧರ್ಮ, ಇಂದ್ರ ಮತ್ತು ದಿಕ್ಪಾಲಕರಾದ ಯಮ, ವರುಣ, ಕುಬೇರ ಮತ್ತು ವಾಸುದೇವರೊಂದಿಗೆ ಸ್ತುತಿಸಲಾಗಿದೆ. ಈ ಶಾಸನದಲ್ಲಿ ಉಲ್ಲೇಖಿತವಾಗಿರುವ ದೇವತೆಗಳು ಬ್ರಾಹ್ಮಣ

ದೇವತೆಗಳಿರಬೇಕು. ಎಂಬ ಅಂಶವನ್ನು ಈ ಶಾಸನ ಸ್ಪಷ್ಟಪಡಿಸುತ್ತದೆ. ಈ ಶಾಸನದಲ್ಲಿ ಇತರ ದೇವತೆಗಳೊಂದಿಗೆ ಉಕ್ತವಾಗಿರುವ ಸಂಕರ್ಷಣ ಮತ್ತು ವಾಸುದೇವ, ಬ್ರಾಹ್ಮಣರು ಮತ್ತು ಭಾಗವತರ ನಡುವೆ ಈಗಾಗಲೇ ಆರಂಭವಾಗಿದ್ದ ಮಿಲನದ ಅಂಶವನ್ನು ತಿಳಿಸುತ್ತದೆ.

**ಮೋರಾ ಶಿಲಾಸ್ತಂಭ ಶಾಸನ**

ಮಥುರ ನಗರದಿಂದ ಹನ್ನೊಂದು ಕಿ.ಮೀ ಅಂತರದಲ್ಲಿರುವ ಮೊರ ಎಂಬ ಗ್ರಾಮದಲ್ಲಿ ಈ ಶಾಸನ ದೊರೆತಿದೆ. ಈ ಶಾಸನವು ವೈಷ್ಣವ ಪಂಥದ ಇತಿಹಾಸದ ದೃಷ್ಟಿಯಿಂದ ಪ್ರಮುಖವಾದುದಾಗಿದೆ. ಈ ಶಾಸನದಲ್ಲಿ 'ಮಹಾಕ್ಷಾತ್ರಪ ರಾಜುವುಲಸಪುತ್ರನ' ಉಲ್ಲೇಖವಿದೆ. ಈ ಶಾಸನದ ಎರಡನೆಯ ಪಂಕ್ತಿಯು 'ಐವರು ವೀರರ ಪ್ರತಿಮೆ'ಗಳನ್ನು ಕುರಿತು ಹೇಳುತ್ತದೆ. ಎಂದು ವೊಗೆಲ್ ಹೇಳಿದ್ದಾರೆ.[11] ಈ ಐದು ವೀರರು ಮಹಾಭಾರತದಲ್ಲಿನ ಪಾಂಡವರು ಎಂದು ಊಹಿಸಬಹುದು. ಎರೆಡನೇ ಪಂಕ್ತಿಯ ಪ್ರಥಮಾರ್ಧದಲ್ಲಿ 'ಭಗವತಾವೃಷ್ಣೆ' ಎಂಬ ರೂಪವು ಪಾಂಡವರ ಜೊತೆಗೆ ವೃಷ್ಣೀ ವಂಶದ ಕೃಷ್ಣನನ್ನೂ ಸಂಕೇತಿಸುತ್ತಿರುವಂತಿದೆ. ಒಟ್ಟಿನಲ್ಲಿ ಮಹಾಭಾರತದ ಈ ಮಹಾವ್ಯಕ್ತಿಗಳಿಗೆ ದೈವತ್ವವನ್ನು ಆರೋಪಿಸುವ ಕಾರ್ಯ ಈ ಕಾಲಕ್ಕಾಗಲೇ ಪ್ರಚುರದಲ್ಲಿತ್ತೆಂಬುದನ್ನು ಈ ಶಾಸನ ಸೂಚಿಸುತ್ತದೆ

**ಮಹಾಸತ್ರಪ ಷೋಡಶನ ಮಥುರಾಶಾಸನ**

ಈ ಶಾಸನದ ಐದು ಪಂಕ್ತಿಗಳು ಹಾಗೂ ಉಳಿದ ಏಳು ಪಂಕ್ತಿಗಳಲ್ಲಿನ ಕೊನೆಯ ನಾಲ್ಕೈದು ಅಕ್ಷರಗಳು ತೃಟಿತಗೊಂಡಿದೆ.[12]

ಈ ಶಾಸನದಲ್ಲಿ 'ಮಹಾಸ್ಥಾನ' ಎಂಬ ಉಲ್ಲೇಖವು, ಮತ್ತೊಂದು ಮಥುರಾ ಶಾಸನದಲ್ಲಿನ ಉಲ್ಲೇಖವಾದ 'ವಿಷ್ಣುವಿನ ಮಹಾದೇವಾಲಯ' ಎಂದು ಅಥವಾ ಕೃಷ್ಣ–ವಾಸುದೇವರ ಇತಿಹಾಸದ ದೃಷ್ಟಿಯಿಂದ ತುಂಬಾ ಪವಿತ್ರವಾದ ಸ್ಥಾನ 'ಸ್ಥಾನ' (ಆವಾಸ, ನಿವಾಸ) ಎಂದು ಅರ್ಥೈಸಬಹುದಾಗಿದೆ. ಅಂದರೆ ವಿಷ್ಣು ಅಥವಾ ಕೃಷ್ಣ ದೇವಾಲಯದಲ್ಲಿ ಚತುಃಶಾಲೆ, ತೋರಣ ಮತ್ತು ವೇದಿಕೆಗಳನ್ನು ನಿರ್ಮಾಣ ಮಾಡಿದ್ದನ್ನು ಈ ಶಾಸನ ಉಲ್ಲೇಖಿಸುತ್ತದೆ. ಈ ವೇಳೆಗಾಗಲೇ ವಿಷ್ಣು ದೇವಾಲಯವು ಆರಾಧನಾ ಸ್ಥಾನವಾಗಿ ಅಸ್ತಿತ್ವದಲ್ಲಿತ್ತೆಂಬುದನ್ನು ಈ ಶಾಸನ ತಿಳಿಸುತ್ತದೆ. ಅಷ್ಟೇ ಅಲ್ಲದೇ ಎರಡನೇ ಶತಮಾನದ ಕೊನೆಯ ಭಾಗಕ್ಕೆ ಸೇರಿದ್ದೆಂದು ಹೇಳಲಾಗಿರುವ ಕೃಷ್ಣ ಜಿಲ್ಲೆಯ ಚಿನ್ನ ಶಾಸನ ವಾಸುದೇವನ ಆರಾಧನೆಯ ವಿಚಾರವನ್ನು ತಿಳಿಸುತ್ತದೆ.[13]

ಸಾ.ಶ.ನಾಲ್ಕನೆಯ ಶತಮಾನಕ್ಕೆ ಸೇರಿದ "ಪಲ್ಲವರ ಶಾಸನಗಳಲ್ಲಿ 'ವಿಷ್ಣುಗೋಪ' ಎಂಬ ಶಬ್ದವಿದೆ. ಪಲ್ಲವರ ರಾಜಮನೆತನದಲ್ಲಿ ಜನಪ್ರಿಯವಾಗಿದ್ದ ಈ ಶಬ್ದ ಪಲ್ಲವ ರಾಜನೊಬ್ಬನನ್ನು ಸೂಚಿಸುತ್ತದೆಯಾದರೂ, ಕಾಳಿದಾಸನ ಮೇಘದೂತ ಪದ್ಯದ 15ರಲ್ಲಿಯೂ ಈ ಶಬ್ದ ಕಾಣದೊರೆತಿದ್ದು, ಇದು ವಿಷ್ಣು ಮತ್ತು ಕೃಷ್ಣರಲ್ಲಿ ಅಭೇದ ಸ್ಥಾಪಿತವಾದ ವಿಚಾರಕ್ಕೆ. ಸಮರ್ಥನೆಯನ್ನೊದಗಿಸುವಂತಹ ಪುರಾತತ್ವ ದಾಖಲೆಯಾಗಿದೆ. ಅಂತೆಯೇ 'ತುಶಮ್ ಶಾಸನ' ವಿಷ್ಣುವನ್ನು ಜಾಂಬವತಿಯ ಮುಖಕಮಲ ಮೇಲಿನ ಮಹಾಭ್ರಮರರೆಂದೂ ಆದಿತ್ಯಸೇನನ ಅಫ್‌ಸದ್‌ಶಾಸನ 'ಶ್ರೀದೇವಿ(ಲಕ್ಷ್ಮಿ)ಯ ಪಾದಸೇವನೆಯಲ್ಲಿ ನಿರತಳಾಗಿರುವಳೋ ಆ ವಾಸುದೇವ ಸುತ ಮಾಧವ'ನೆಂದೂ ವರ್ಣಿಸಿದೆ. ಬರಾಹುರಿನ ಬೆಟ್ಟದ

ಗುಹೆಯೊಂದರಲ್ಲಿ, ಸಾ.ಶ. 5ನೇ ಶತಮಾನದ ಮೌಖರಿಗಳ ದೊರೆಯಾಗಿದ್ದ ಅನಂತವರ್ಮನು ಶ್ರೀ ಕೃಷ್ಣನ ಪ್ರತಿಮೆಯೊಂದನ್ನು ಸ್ಥಾಪಿಸಿದನೆಂಬುದಕ್ಕೆ ಪುರಾವೆಯನ್ನೊದಗಿಸುತದ್ತೆ. ಇದೇ ಮೌಖರಿ ರಾಜರ ಶಾಸನ ಒಂದರಲ್ಲಿ (ಜಾನಾಪುರದ ಶಾಸನ) ವಿಷ್ಣುವನ್ನು 'ಆತ್ಮಭೂ' ಎಂದು ವರ್ಣಿಸಲಾಗಿದೆ.

ಸಾ.ಶ. 5ನೆಯ ಶತಮಾನದ ಆರಂಬಧ ಕಾಲದ ಮಾಂಡಸೂರ್ ಶಾಸನದಲ್ಲಿ ಚಕ್ರಪೂಜೆಯ ಉಲ್ಲೇಖವಿದೆ. ಈ ಶಾಸನದಲ್ಲಿ ವಿಷ್ಣುವನ್ನು 'ಶರಣ್ಯ, ಜಗದ್ದಾಸ, ಅಪ್ರಮೇಯ ಅಜ' ಎಂಬುದರ ಜೊತೆಗೆ ವಿಷ್ಣುವಿನ ವಿಶ್ವರೂಪದ ಕಲ್ಪನೆಯ ವರ್ಣನೆಯೂ ದೊರೆಯುತ್ತದೆ. ಸಾಶ.432ರ ಗಾಂಧಾರ ಶಾಸನದಲ್ಲಿ 'ಮಳೆಗಾಲದ ನಾಲ್ಕು ತಿಂಗಳ ಅವಧಿಯಲ್ಲಿ, ನಿದ್ರಾವಶನಾಗಿರುವ ಮಧುಸೂದನನ ಉಲ್ಲೇಖವಿದೆ. ಸಾ.ಶ.464ರ ರಾಜಮಾನದೇವನ ಶಾಸನವೊಂದು ಗರುಡವಾಹನನಾಗಿರುವ ವಿಷ್ಣುವಿನ ದೇವಾಲಯದ ಮುಂದೆಯೇ ದೊರೆತಿದೆ. ಇದು ನೇಪಾಳದ ದೋಲಪರ್ವತದ ಮೇಲೆ .ಸ್ಥಾಪಿತವಾಗಿರುವ ದೇವಾಲಯವಾಗಿದೆ.

ಸಾ.ಶ.484ರ ಏರಾನ್ ಶಾಸನದಲ್ಲಿ ವಿಷ್ಣುವನ್ನು 'ಜನಾರ್ಧನ, 'ಚತುರ್ಭುಜ, 'ಚತುಸ್ಸಾಗರಶಯನ', 'ಜಗತ್ತಿನ ಸೃಷ್ಟಿ–ಸ್ಥಿತಿ–ಲಯಗಳಿಗೆ ಕಾರಣಕರ್ತ'ನೆಂದೂ ವಿವರಿಸಲಾಗಿದೆ. ಸಾ.ಶ ಆರನೇ ಶತಮಾನದ ಕದಂಬರ ಕಾಲದ ಶಾಸನವೊಂದರಲ್ಲಿ 'ಜಗತ್‌ಪ್ರವೃತ್ತಿ ಸಂಹಾರ ಸೃಷ್ಟಿಮಾಯಧರ'ನಾದ ಹರಿಯನ್ನು ಸ್ತುತಿಸಲಾಗಿದೆ. ಸಾ.ಶ.766ರ ಅಲಿಂಗ ದಾನ ಶಾಸನದಲ್ಲಿ 'ಪಾರಿಜಾತಹರಣ'ದ ಘಟನೆಯ ಉಲ್ಲೇಖವಿದೆ. ಸಾ.ಶ. ಸುಮಾರು ಸಾ.ಶ.1125ರ ಬೆಲಾವ ದಾನ ಶಾಸನದಲ್ಲಿ ಕೃಷ್ಣನನ್ನು ಹರಿಯ ಅಂಶಾವತಾರವೆಂದು ಹೇಳಲಾಗಿದೆ. ಶತ್ರುಗಳನ್ನು ನಿಗ್ರಹಿಸಿ, ತಾಯಿ ದೇವಕಿಯ ಬಳಿ ಬೆಳೆಯುತ್ತಿರುವ ಕೃಷ್ಣನ ಉಲ್ಲೇಖ ಸ್ಕಂದಗುಪ್ತನ ಭತಾರಿ ಶಾಸನದಲ್ಲಿ ಕಾಣದೊರೆಯುತ್ತದೆ. ದೇಶದಾದ್ಯಂತ – ಉತ್ತರದಲ್ಲಿ ನೇಪಾಳ ಹಾಗೂ ಬಿಯಾಸ್‌ನ ಮೇಲ್ನಾಡು ಪ್ರದೇಶಗಳಲ್ಲಿ, ದಕ್ಷಿಣದಲ್ಲಿ, ಪರಮಭಾಗವತ' ರೆನಿಸಿಕೊಂಡಿದ್ದ ಪಲ್ಲವ ಮತ್ತು ಗಂಗರಾಜರ ನಾಡುಗಳಲ್ಲಿ, ಪೂರ್ವದಲ್ಲಿ ಬಂಗಾಳದಲ್ಲಿ ಹಾಗೂ ಪಶ್ಚಿಮದಲ್ಲಿ ಕಾಥಿಯಾವಾಡದಲ್ಲಿ – ವಿಷ್ಣು – ನಾರಾಯಣ – ವಾಸುದೇವರ ದೇವಾಲಯಗಳು ಹಾಗೂ ಗರುಡಧ್ವಜಗಳು ಸ್ಥಾಪಿತವಾದುವೆಂದು ಗುಪ್ತಯುಗದ ಅನೇಕ ಶಾಸನಗಳು ಹೇಳುತ್ತವೆ. ಭುವನೇಶ್ವರದ ಶಾಸನವೊಂದರಲ್ಲಿ ಬಲರಾಮ, ಕೃಷ್ಣ ಮತ್ತು ಸುಭದ್ರೆಯರ ಉಪಾಸನೆಯ ವಿಚಾರ ಕಾಣದೊರೆಯುತ್ತದೆ.[14]

ಈ ಮೇಲಿನ ಮೊದಲ ವರ್ಗದ ಶಾಸನಗಳು ಬಹುತೇಕವಾಗಿ ಸಮಾನ್ಯ ಶಕ ಪೂರ್ವದ ಅವಧಿಯವಾಗಿದ್ದು ಭಾಗವತ ಅಥವಾ ವೈಷ್ಣವ ಪಂಥದ ಹಾಗೂ ವಿಷ್ಣುಗಾಥೆಯ ಸೀಮಿತ ರೂಪಗಳನ್ನು ತಿಳಿಸುತ್ತದೆ. ಸಾಮಾನ್ಯ ಶಕದ ನಂತರದ ಶಾಸನಗಳು ವೈಷ್ಣವ ಪಂಥದ ಕುರಿತಾದ ಮಾಹಿತಿಗಳನ್ನು ವಿವರವಾಗಿ ತಿಳಿಸುತ್ತದೆ.

**ಶಿವಮೊಗ್ಗ ಜಿಲ್ಲೆಯ ಶಾಸನಗಳಲ್ಲಿ ವೈಷ್ಣವ ಧರ್ಮ**

ಶಿವಮೊಗ್ಗ ಜಿಲ್ಲೆಯಲ್ಲಿ ಲಭ್ಯವಿರುವ ಆಕರಗಳನ್ವಯ ವೈಷ್ಣವ ಧರ್ಮಕ್ಕೆ ಜೈನ ಮತ್ತು ಶೈವ ಧರ್ಮಗಳಿಗೆ ಇದ್ದಷ್ಟು ಪ್ರಾಚೀನತೆ ಮತ್ತು ಪ್ರಾಧಾನ್ಯತೆ ಇದ್ದಂತೆ ಕಂಡುಬರುವುದಿಲ್ಲ. ಆದರೂ ಜಿಲ್ಲೆಯಲ್ಲಿ ದೊರೆತಿರುವ

ಕೆಲವು ಶಾಸನಗಳು ಪುರಾಣಗಳಿಗೆ ತಳಕು ಹಾಕಿಕೊಂಡಿರುವುದನ್ನು ಈ ಜಿಲ್ಲೆಯಲ್ಲಿ ಲಭ್ಯವಿರುವ ಶಾಸನಗಳ ಅಧ್ಯಯನದಿಂದ ಕಂಡುಬಂದಿದೆ.

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕು ಭೀಮನಕಟ್ಟೆ ಮಠದಲ್ಲಿನ ತಾಮ್ರ ಶಾಸನವು ಹರಿಸ್ತುತಿ(ವಿಷ್ಣು)ಯಿಂದ ಪ್ರಾರಂಭವಾಗುತ್ತದೆ. ಇದರಲ್ಲಿ ಕಿಷ್ಕಿಂದಾ ನಗರದಿಂದ ರಾಜ್ಯವಾಳುತ್ತಿದ್ದ ಜನಮೇಜಯ ಭೂಪನು ಸೀತಾಪುರ ವೃಕೋದರ ಕ್ಷೇತ್ರ (ಭೀಮನಕಟ್ಟೆ)ದ ಮುನಿವೃಂದ ಮಠಕ್ಕೆ ಅಲ್ಲಿಯ ಗುರುಗಳು ಗರುಡವಾಹನ ತೀರ್ಥ ಶ್ರೀ ಪಾದರ ಶಿಷ್ಯರಾದ ಕೈವಲ್ಯನಾಥರಿಂದ ಆರಾಧಿಸಲ್ಪಡುವ ಶ್ರೀ ಸೀತಾರಾಮ ದೇವರ ಪೂಜೆಗಾಗಿ ಭೂಮಿಯನ್ನು ದಾನ ಮಾಡಿದ ಸಂಗತಿಯನ್ನು ವಿವರಿಸಿಲಾಗಿದೆ. ಈ ಭೀಮನಕಟ್ಟೆ ಮಠವು ವೈಷ್ಣವ ಸಂಪ್ರದಾಯದ ಮಠವಾಗಿದೆ. ಆದರೆ, ಇದರ ಪ್ರಾಚೀನತೆಯನ್ನು ಮಠದಲ್ಲಿನ ಶಾಸನವನ್ನು ಆಧರಿಸಿ ನಿಖರವಾಗಿ ಹೇಳಲು ಸಾಧ್ಯವಿಲ್ಲ. ಪ್ರಾಚೀನ ದೇವಾಲಯಗಳಲ್ಲಿ ಕುಬಟೂರಿನ ಶ್ರೀ ರಾಮೇಶ್ವರ ದೇವಾಲಯವನ್ನು ಹೆಸರಿಸಬಹುದು. ಇದು ಸಾ.ಶ 900ರಲ್ಲಿ ನಿರ್ಮಾಣವಾಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿನ ಕೆಲವು ಶಾಸನಗಳು ವಿಷ್ಣುವಿನ ಸ್ತುತಿಯೊಂದಿಗೆ ಪ್ರಾರಂಭವಾಗಿರುವುದು ಕಂಡುಬಂದಿದೆ. ಸಾ.ಶ. ಹನ್ನೆರಡನೇಯ ಶತಮಾನದ ಒಳಗಿನ ಕಾಲಮಾನದಲ್ಲಿ ಜಿಲ್ಲೆಯಲ್ಲಿ ವಿಷ್ಣು, ನಾರಾಯಣ, ಗೋಪಾಲಕೃಷ್ಣ, ಜನಾರ್ಧನ ಇಂಥ ದೇವಾಲಯಗಳು ನಿರ್ಮಾಣವಾದರೂ ವೈಷ್ಣವ ಪಂಥ ಅಥವಾ ಭಾಗವತ ಸಂಪ್ರದಾಯವು ಆಚರಣೆಯಲ್ಲಿರುವುದು ಕಂಡುಬಂದಿದೆ.

ಶಿವಮೊಗ್ಗ ಜಿಲ್ಲೆಯು ಮಲೆನಾಡು ಪ್ರದೇಶವಾಗಿದ್ದು, ಇಲ್ಲಿನ ಸುಂದರ ಪರಿಸರದಿಂದಾಗಿ ಹಾಗೂ ಪ್ರಾಚೀನ ಇತಿಹಾಸಕ್ಕೆ ಸಂಬಂಧಪಟ್ಟಂತೆ ಪ್ರಸಿದ್ಧಿ ಪಡೆದಿದೆ. ಇಲ್ಲಿ ಹಲವಾರು ರಾಜಮನೆತನಗಳು ಆಡಳಿತ ನಡೆಸಿದ್ದಾರೆ. ಗುಡಿ ಗೋಪುರಗಳು, ಶ್ರೇಷ್ಠ ಶಿಲ್ಪಕಲೆ ಹಾಗೂ ವಾಸ್ತು ವಿನ್ಯಾಸಗಳು ಈ ಜಿಲ್ಲೆಯಲ್ಲಿ ಕಾಣಲು ಲಭ್ಯವಿದೆ. ಈ ಜಿಲ್ಲೆಯಲ್ಲಿ ವೈದಿಕಧರ್ಮ, ಶೈವಧರ್ಮ, ವೈಷ್ಣವಧರ್ಮ, ಜೈನಧರ್ಮ ಹಾಗೂ ಇತರೆ ಧರ್ಮಗಳ ಬೆಳವಣಿಗೆಯನ್ನು ಹೊಂದಿರುವುದು ಕಂಡುಬಂದಿದೆ.

## ಶಿವಮೊಗ್ಗ ಜಿಲ್ಲೆಯ ಶಾಸನಗಳಲ್ಲಿ ವೈಷ್ಣವ ಧರ್ಮದ ಆರಂಭ ಶ್ಲೋಕಗಳು

ಕರ್ನಾಟಕದಲ್ಲಿ ಲಭ್ಯವಾಗಿರುವ ಶಾಸನಗಳು ಒಕ್ಕಣೆಯು ದೇವತಾ ಪ್ರಾರ್ಥನೆಯ ಶ್ಲೋಕಗಳೊಂದಿಗೆ ಪ್ರಾರಂಭವಾಗುವಾಗುವುದು ಸರ್ವೇಸಾಮಾನ್ಯ. ಶಿವಮೊಗ್ಗ ಜಿಲ್ಲೆಯ ಶಾಸನಗಳಲ್ಲೂ ಸಹ ದೇವತಾ ಪ್ರಾರ್ಥನೆಯ ಶ್ಲೋಕಗಳ ಒಕ್ಕಣೆ ಕಂಡು ಬಂದಿವೆ. ಜಿಲ್ಲೆಯ ಶಿಲಾಶಾಸನಗಳ ಪೈಕಿ ಹಲವಾರು ಶಾಸನಗಳಲ್ಲಿ ಯಾವುದೇ ಶ್ಲೋಕವನ್ನೂ ಬಳಸದೇ 'ಸ್ವಸ್ತಿ' ಎಂಬ ಮಂಗಳ ಶಬ್ಧದಿಂದ ಶಾಸನಗಳು ಪ್ರಾರಂಭವಾಗುತ್ತವೆ. ಸಾಮಾನ್ಯವಾಗಿ ಶಾಸನ ಸಹಿತ ವೀರಗಲ್ಲು ಹಾಗೂ ಮಾಸ್ತಿಕಲ್ಲುಗಳಲ್ಲಿ ಶ್ಲೋಕಗಳು ಕಾಣಬರುವುದಿಲ್ಲ. ಶಾಸನಗಳನ್ನು ಬರೆಸುವಾಗ ಈ ಅಂಶವು ಪಾರಂಪರ್ಯವಾಗಿ ಬಂದಿರಬಹುದು. ಇದಕ್ಕೆ ಸ್ಮೃತಿಶಾಸ್ತ್ರಗಳಲ್ಲಿ ರಾಜಧರ್ಮವನ್ನು ನಿರೂಪಿಸುತ್ತಾ ಶಾಸನಗಳಲ್ಲಿನ ಒಕ್ಕಣೆಗಳು ಯಾವ ಕ್ರಮದಲ್ಲಿರಬೇಕು ಎಂಬುದನ್ನು ನಿರ್ಣಯ ಮಾಡಿ ಹೇಳಲಾಗಿದೆ. ಆ ಕ್ರಮವನ್ನೇ ಅನುಸರಿಸುತ್ತ ಬರಲಾಗಿರಬಹುದು.

ಭಾರತೀಯ ಸನಾತನ ಧರ್ಮದಲ್ಲಿ ಯಾವ ಕೆಲಸವನ್ನೇ ಆಗಲಿ ಪ್ರಾರಂಭಿಸುವಾಗ ಆ ಕಾರ್ಯವು ನಿರ್ವಿಘ್ನವಾಗಿ ನೆರವೇರಿ, ಫಲಪ್ರದವಾಗಲೀ ಎಂಬ ಆಶಯದಿಂದ ದೇವತಾ ಪ್ರಾರ್ಥನೆಯನ್ನು ಮಾಡುವ

ಪದ್ಧತಿ ಬಹಳ ಹಿಂದಿನಿಂದ ನಡೆದುಬಂದಿದೆ. ಅದೇ ಪದ್ಧತಿಯನ್ನು ಶಾಸನಗಳ ಬರೆಯುವಿಕೆಯಲ್ಲೂ ಅನುಸರಿಸಲಾಗಿದೆ. ಶಾಸನಗಳಲ್ಲಿನ ಶ್ಲೋಕಗಳು ಶಾಸನವನ್ನು ಬರೆಸುವ ವ್ಯಕ್ತಿಯು ಅನುಸರಿಸುತ್ತಿರುವ ಧರ್ಮವನ್ನು ಅವಲಂಬಿಸಿರುತ್ತದೆ. ಅವನು ಶೈವನಾಗಿದ್ದರೆ, ಶಿವಸಂಬಂಧೀ ಶ್ಲೋಕಗಳೂ, ವೈಷ್ಣವನಾಗಿದ್ದರೆ ವಿಷ್ಣು ಸಂಬಂಧೀ ಶ್ಲೋಕಗಳೂ, ಜೈನನಾಗಿದ್ದರೆ ಜಿನ ಸಂಬಂಧಿ ಶ್ಲೋಕಗಳೂ ಶಾಸನದಲ್ಲಿ ಕಂಡು ಬರುತ್ತವೆ. ಶಾಸನ ಶ್ಲೋಕಗಳಿಂದ ಶಾಸನವನ್ನು ಬರೆಸಿದ ರಾಜ ಅಥವಾ ವ್ಯಕ್ತಿ ಯಾವ ಧರ್ಮವನ್ನು ಎಂಬುದನ್ನು ಗುರುತಿಸಬಹುದಾಗಿದೆ ಹಾಗೂ ಇಲ್ಲಿನ ಕೆಲವು ಶಾಸನಗಳಲ್ಲಿ ಈ ಶ್ಲೋಕದ ನಂತರ ವರಾಹ ಸ್ವಾಮಿಯ ಪ್ರಾರ್ಥನಾ ಶ್ಲೋಕವಿರುವುದು ಕಂಡುಬಂದಿದೆ.

ಸಾಮಾನ್ಯವಾಗಿ ಶಿವಮೊಗ್ಗ ಜಿಲ್ಲೆಯ ಶಾಸನಗಳಲ್ಲಿ ಕಂಡುಬರುವ ವೈಷ್ಣವ ಶ್ಲೋಕಗಳೆಂದರೆ;

ಶಿವಮೊಗ್ಗ ತಾಲ್ಲೂಕು ಕೂಡ್ಲಿ ಮಠದಲ್ಲಿ ಸಾ.ಶ. 1516ಕ್ಕೆ ಸೇರಿದ ತಾಮ್ರಶಾಸನದಲ್ಲಿನ ವಿಶೇಷ ಪ್ರಾರ್ಥನಾ ಶ್ಲೋಕ.

***ಹರೇರ್ಲೀಲಾ ವರಾಹಸ್ಯ: ದಂಷ್ಟ್ರಾದಂಡ ಸ ಪಾತುವಃ ।***

***ಹೇಮಾದ್ರಿ ಕಲಶಾಯತ್ರ ಧಾಕ್ರೀಛಕ್ರ ಶ್ರಿಯಂ ದಧೌ ॥***[15]

***ತೀರ್ಥಹಳ್ಳಿ ತಾಲ್ಲೂಕು ಅಂದಿಗೆರೆಯ ಶಾಸನ***

***ಶ್ರೀ ವೆಂಕಟೇಶಾತಯ ನಮಃ ।***

***ಯಸ್ಯ ಸಂಪರ್ಕ ಪುಣ್ಯೇನ ನಾರೀ ರತ್ನ ಮಭೂತ್ಸಿಲಾ ।***

***ಯದುಪಾಸ್ಯಂ ಸಮನಸಾಂ ತದ್ವಸ್ತು ಥ್ವಂದ್ವಮಾಶ್ರಯೇ ॥***[16]

ಈ ತೀರ್ಥಹಳ್ಳಿ ತಾಲ್ಲೂಕು ಅಂದಿಗೆರೆಯ ಶಾಸನದಲ್ಲಿ ಶಿವ, ವಿಷ್ಣು, ಬ್ರಹ್ಮರಲ್ಲಿ ಭೇದವೆಣಿಸದೇ ತ್ರಿಮೂರ್ತಿಗಳನ್ನೂ ಸಹ ಸಮಾನವಾಗಿ ಪ್ರಾರ್ಥಿಸಲಾಗಿರುವ ಒಂದು ಅಪರೂಪದ ರಚನೆಯನ್ನು ಕಾಣಬಹುದು. ಮೊದಲು ಗಣಪತಿಯನ್ನು ನಿರ್ವಿಘ್ನತೆಗಾಗಿ ಪ್ರಾರ್ಥಿಸಿ ನಂತರ ತ್ರಿಮೂರ್ತಿಗಳನ್ನೂ ಶಚೀವರನಾಥ ಇಂದ್ರನನ್ನೂ ಸ್ತುತಿಸಲಾಗಿದೆ.

***ತೀರ್ಥಹಳ್ಳಿ ತಾಲ್ಲೂಕು ತೂದೂರಿನ ಶಾಸನ***

***ಮಹೇಶ ಕಮಲಾಕಾಂತಾ ಗೌರೀವರ ಶಚೀವರಾ ।***

***ದೇವಾ ಪ್ರೀತಾ ಸದಾ ರಕ್ಷಾಂ ಕುರ್ವಂತು ಜಗತಾಂ ಮುದಾ ॥***[17]

ಕೆಲವು ಶಾಸನಗಳಲ್ಲಿ ವಿಘ್ನನಿವಾರಕನಾದ ವಿನಾಯಕನನ್ನು ಮೊದಲಿಗೆ "ಶ್ರೀ ಗಣಪತಿಯೇ ನಮಃ" ಎಂದು ಸ್ಮರಿಸಿರುವುದಿದೆ. ಆದರೆ ಗಣಪತಿಯನ್ನು ಕುರಿತಂತೆ ಶ್ಲೋಕಗಳನ್ನು ಅಪರೂಪವಾಗಿವೆ. ಈ ತೀರ್ಥಹಳ್ಳಿ ತಾಲ್ಲೂಕು ತೂದೂರಿನ ಶಾಸನದಲ್ಲಿ ವಿನಾಯಕನ ನಂತರ ಸರಸ್ವತಿಯನ್ನೂ ಪ್ರಾರ್ಥಿಸಲಾಗಿರುವುದ ಕಂಡುಬಂದಿದೆ.

***ತೀರ್ಥಹಳ್ಳಿ ತಾಲ್ಲೂಕು ತೂದೂರಿನ ಶಾಸನ***

*ಆಲಂಭೇ ಜಗದಾಲಂಬಂ ಲಂಬೋಧರ ಪದಾಂಬುಜಂ ।*
*ಶುಷ್ಯಂತಿ ಯದ್ರಜಸ್ಪರ್ಷಾತ್ಸದ್ಯಃ ಪ್ರತ್ಯೂಹ ಮರ್ಧಯಃ ॥*
*ಬ್ರಹ್ಮಾದಯೋ ವಿಘ್ನವಿನಾಶನಸ್ಯ ಯತ್ನೇನ ಪಾದಾಂಬುಜ ಮರ್ಚಯಂತಿ ।*
*ನಮಾಮಿ ಭಕ್ತೇಪ್ಸಿತ ಕಾಮಮೀಶಂ ವಿನಾಯಕಂ ನಾಗವಿಭೂಷಿತಾಂಗಂ ॥*[18]

ಹೊನ್ನಾಳಿಯ ಶಾಸನ ಸಂಖ್ಯೆ 87 ರಲ್ಲಿ ಕಂಡುಬಂದಿರುವ ವಿಷ್ಣು ಸಂಬಂಧಿ ಪ್ರಾರ್ಥನ ಶ್ಲೋಕ ಇಂತಿದೆ.

*ನಿತ್ಯೋಧ್ಭಾಸಿಮೃಣಾಳ ಕೋಮಲನಿಜಪ್ರೋತ್ತುಂಗದಂಷ್ಟ್ರೋಚ್ಚ್ರಿತಂ ।*
*ಕ್ಷೋಣೀಚಕ್ರಮಭಿಪ್ರಸಾರಿತಪಯಃ ಪೂರಂಭಿರಾಮಂ ಮಹತ್ ।*
*ಸುನಂದಂ ವಿಕತ್ಸರೋರುಹಧಿಯಾ ಸದ್ಯಃ ಸರೋಜಾಲಯಂ ।*
*ಆರೊಢಾಮವಲೋಕ್ಯಜಾತ ಹಸಿತಃ ಪೋತ್ರೀ ಹರಿಃ ಪಾತುವಃ ॥*

ಹೊನ್ನಾಳಿಯ ಶಾಸನ ಸಂಖ್ಯೆ 87 ರಲಿವಿಷ್ಣುವಿನ ವರಾಹಾವತಾರದ ಪರವಾದ ಇನ್ನೊಂದು ಸುಂದರ ರಚನೆಯನ್ನು ನೋಡಬಹುದು.

*ಜಯತ್ಯಾವಿಷ್ಕೃತಂ ವಿಷ್ಣೋರ್ವಾರಾಹಂ ಕ್ಷೋಭಿ ತಾರ್ಣವಂ ।*
*ದಕ್ಷಿಣೋನ್ನತ ದಂಷ್ಟ್ರಾಗ್ರೇ ವಿಶ್ರಾಂತ ಭುವನಂ ವಪುಃ ।*

ಗುಪ್ತರು ಹಾಗೂ ವಾಕಾಟಕರು ಭಾಗವತಕ್ಕೆ ಆದ್ಯತೆ ನೀಡಿದ್ದರು. ಗುಪ್ತರು ಮತ್ತು ವಾಕಾಟಕರೊಂದಿಗಿನ ಕದಂಬರ ವೈವಾಹಿಕ ಸಂಬಂಧಗಳು[19] " ಕರ್ನಾಟಕದಲ್ಲಿ ವೈಷ್ಣವ ಧರ್ಮದ ಪ್ರಗತಿಗೆ ಪ್ರೇರಕವಾದವು. ಕದಂಬ ದೊರೆ ಕಾಕುತ್ಸವರ್ಮನ ಅವಧಿಯಿಂದ ಕದಂಬರ ಶಾಸನಗಳಲ್ಲಿ ವಿಷ್ಣುವಿನ ಉಲ್ಲೇಖವಿರುವುದನ್ನು ಕಾಣಬಹುದು. ಹಲ್ಮಡಿ ಶಾಸನದಲ್ಲಿ[20] 'ಜಯತಿ ಶ್ರೀ ಪರಿಷವಂಗ ಶ್ಯಾರಂಗಂಯಾನರ–ಅಚ್ಯುತ: ದಾನವಾಕ್ಷನೋರ–ಯುಗಾಂತಾಗ್ನಿ: ಶಿಷ್ಟಾನಾನ್ತು ಸುದರ್ಶನ:' ಇದು ಕರ್ನಾಟಕದ ಶಾಸನ ಇತಿಹಾಸದಲ್ಲಿ ಪ್ರಥಮ ಬಾರಿಗೆ ವಿಷ್ಣುವನ್ನು ಅಚ್ಯುತನೆಂದು ಸಂಬೋಧಿಸಲಾಗಿದೆ. ಪ್ರಥಮ ಬಾರಿಗೆ ವಿಷ್ಣುವನ್ನು ಲಕ್ಷ್ಮೀಯೊಂದಿಗೆ ಹಾಗೂ ವಿಷ್ಣುವಿನ ಸುದರ್ಶನದ ಉಲ್ಲೇಖವನ್ನು ಕಾಣಬಹುದು.[21]

ಮೃಗೇಶವರ್ಮನ (ಸಾ.ಶ.460) ಬನವಾಸಿ ಸ್ತಂಭಶಾಸನದಲ್ಲಿ 'ಸ್ವಸ್ತಿ ಜಿತಂ ಭಗವತಾ ಜೋತಿರ್ಮಯಂ ಬ್ರಹ್ಮವಿದಾಮ್ ಶರಣ್ಯಾಂ ವಿಶ್ವಸ್ಯ ಕರ್ತಾರಂ–ಅನೇಕರೂಪಂ, ವಿಭುಂಪತಿಂ ಸ್ಥಾವರಜಂಗಮಾನಂ, ವಿಷ್ಣುನಮಸ್ಯಾಮಿ ತದೇಕಚಿತ್ತಂ' ಎಂದಿದೆ. ಈ ಶಾಸನವು ಬನವಾಸಿಯಲ್ಲಿ ದೊರೆತ ಏಕೈಕ ಕದಂಬ ಶಾಸನವೆನಿಸಿದ್ದು, ವಿಷ್ಣು ದೇವಾಲಯದ ಮುಂದುಗಡೆ ನಿಲ್ಲಿಸಿದೆ.[22] ಇದು ವಿಷ್ಣುವೇ ಸರ್ವೋತ್ತಮನೆಂದು ಉಲ್ಲೇಖಿಸಲ್ಪಟ್ಟ ಶಾಸನವಾಗಿದೆ.

ಕದಂಬ ಒಂದನೆಯ ಕೃಷ್ಣವರ್ಮನ ಮಗನಾದ ವಿಷ್ಣುವರ್ಮನ ಹೆಬ್ಬೆಟ್ಟ ಶಾಸನ[23] ವಿಷ್ಣು ಸ್ತುತಿಯಿಂದ ಪ್ರಾರಂಭಗೊಳ್ಳುತ್ತದೆ. 'ಜೀತಂ ಭಗವತಾ ತೇನ ವಿಷ್ಣುನಾ ಯಸ್ಯ ವಕ್ಷಸಿ ಶ್ರೀಸಸ್ವಯಂ ಭಾತಿ ದೇವಚ್ಛ ನಾಭಿಪದೇ ಪಿತಾಮಹ:' ಎಂದಿದೆ. ಇಲ್ಲಿ ವಿಷ್ಣುವಿನ ಹೃದಯದಲ್ಲಿ ವಾಸಿಸುವ ಲಕ್ಷ್ಮೀಯ ಪ್ರಸ್ತಾಪವೂ ಇದೆ. ಅದರಂತೆ ಕದಂಬ ರವಿವರ್ಮನ ಗುಡ್ನಾಪುರ ಶಾಸನವು[24] 'ಜಯತಿ ಸುರವಧುನಾಂ ಮನ್ಮಥ:

ಕಾಮಿನಿನಾಮ.... ಎಂಬ ಪ್ರಾರ್ಥನಾ ಪದ್ಯದಿಂದ ಪ್ರಾರಂಭವಾಗುತ್ತಿದ್ದು, ಅರಮನೆಯಲ್ಲಿ ಮದನನಿಗಾಗಿ ದೇವಾಲಯವನ್ನು ನಿರ್ಮಿಸಿದ್ದನ್ನು ಹೇಳುತ್ತದೆ.

ಕದಂಬ ದೊರೆಯಾದ ಎರಡನೆಯ ಕೃಷ್ಣವರ್ಮನ ಬೆನ್ನೂರು ತಾಮ್ರಫಲಕದಲ್ಲಿ[25] ವಿಷ್ಣುವನ್ನು ಕೃಷ್ಣನಿಗೆ ಹೋಲಿಸಲಾಗಿದೆ. ಪ್ರಾರ್ಥನಾ ಪದ್ಯದಲ್ಲಿರುವ 'ಜೀತಂ ಭಗವತಾ' ಮತ್ತು 'ನಮೋ ವಿಷ್ಣುವೇ' ಎಂಬ ಪದಗಳು ಕೃಷ್ಣವರ್ಮ ವಿಷ್ಣುವಿನ ಆರಾಧಕನಿರಬಹುದೆಂಬ ತರ್ಕಕ್ಕೆ ಬರುತ್ತವೆ.

ಕದಂಬ ಹರಿವರ್ಮನು ಶಿವನ ಆರಾಧಕನಾಗಿದ್ದು ಇತನ ಸಂಗೊಳ್ಳಿ ಶಾಸನದಲ್ಲಿ[26] ಇಪ್ಪತ್ತುಮೂರು ಬ್ರಾಹ್ಮಣ ದಾನಿಗಳ ಉಲ್ಲೇಖವಿದ್ದು ವೈಕುಂಠಶರ್ಮ, ವಿಷ್ಣುಶರ್ಮ ಮತ್ತು ಪ್ರಜಾಪತಿಶರ್ಮರ ಹೆಸರುಗಳಿವೆ. ಜೊತೆಗೆ ತ್ರೈಪುರುಷ ದೇವರಾದ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರ ಪ್ರತ್ಯೇಕ ಆರಾಧನೆಯು ಜಾರಿಯಲ್ಲಿತ್ತೆಂಬುದಕ್ಕೆ 'ನಮೋ ಹರಿ–ಹರ–ಹಿರಣ್ಯಗರ್ಭೋದ್ಯಾಯ: ಎಂದಿದೆ.[27]

ಗಂಗರ ಕಾಲದಲ್ಲಿ ಜೈನಧರ್ಮವು ಪ್ರಾಬಲ್ಯವನ್ನು ಪಡೆದಿದ್ದರೂ ಸಹ ಗಂಗರ ಬಹುತೇಕ ತಾಮ್ರಶಾಸನಗಳಲ್ಲಿ 'ಜೀತಂ ಭಗವತಾ ಗತಗಗಣಾಧೇನ ಪದ್ಮನಾಭೇನ' ಎಂದು ವಿಷ್ಣುವನ್ನು ಪದ್ಮನಾಭನ ರೂಪದಲ್ಲಿ ಆರಾಧಿಸಲಾಗಿದೆ. ಸಾ.ಶ.4 ನೇ ಶತಮಾನದಿಂದ ಈ ಸ್ತುತಿಯನ್ನು ಗಂಗರ ಶಾಸನಗಳಲ್ಲಿ ವಿದ್ವಾಂಸರು ಗುರುತಿಸುತ್ತಾರೆ. ಅದರಂತೆ ಗಂಗ ರಾಜರ ಹೆಸರುಗಳಾದ ಮಾಧವ, ಹರಿವರ್ಮ, ಕೃಷ್ಣವರ್ಮ, ಎರಡನೆಯ ಮಾಧವನ ಇತ್ಯಾದಿ ಹೆಸರುಗಳು ಈ ಧರ್ಮದ ಪ್ರಭಾವವನ್ನು ಸೂಚಿಸುತ್ತವೆ.

ಎರಡನೆಯ ಮಾಧವನ ಹಾಸನದ ಕೆರೆಗಳೂರು ತಾಮ್ರಶಾಸನವು ಪದ್ಮನಾಭನ ಸ್ತುತಿಯಿಂದಲೇ ಆರಂಭಗೊಳ್ಳುತ್ತಿದ್ದು, ಸೇಂದ್ರಕ ವಿಷಯದಲ್ಲಿ ರಾಜನು ಸಂಗಮಪುರ ಎಂಬ ಪಟ್ಟಣವನ್ನು ನಿರ್ಮಿಸಿ, ವಲ್ಲಭಿ ಪ್ರಾಂತದಲ್ಲಿಯ 5 ಹಳ್ಳಿಗಳನ್ನು, 22 ಕಂಚಿನ ಮತ್ತು 2 ತಾಮ್ರದ ಪಾತ್ರೆಗಳನ್ನು, ಒಂದು ಎತ್ತನ್ನು, ಒಂದು ವಿಷ್ಣು ವಿಗ್ರಹವನ್ನು ಮತ್ತು ಆಭರಣಗಳನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ.[28]

ಎರಡನೆಯ ಮಾಧವನ ಸಹೋದರನಾದ ವಿಷ್ಣುಗೋಪನನ್ನು ಗಂಗ ಶಾಸನಗಳಲ್ಲಿ 'ನಾರಾಯಣ–ಚರಣ–ಆನುದ್ಯಾತ:[29] ಅಂದರೆ ನಾರಾಯಣನ ಚರಣಗಳನ್ನು ಪೂಜಿಸುವನೆಂದು ಬಣ್ಣಿಸಿವೆ.[30] ಗುಮ್ಮರೆಡ್ಡಿಪುರ ಫಲಕ[31] ಗಂಗದೊರೆಯಾದ ದುರ್ವಿನಿತನಿಗೆ ಸಂಬಂಧಿಸಿದ್ದು, ರಾಜನು ಕೃಷ್ಣ ಕುಲಕ್ಕೆ ಸೇರಿದವನೆಂದೂ, ಬಲದಲ್ಲಿ 'ವೃಷ್ಣಿ–ಕುಲ–ತಿಲಕ–ಕೃಷ್ಣ'ಗೆ ಸಮಾನನೆಂದೂ ಬಣ್ಣಿಸಲಾಗಿದೆ.

ಶಿಕಾರಿಪುರದ ಶಾಸನ ಸಂಖ್ಯೆ 137 ರಲ್ಲಿ ಉಲ್ಲೇಖಿಸಿದಂತೆ ಚಾಲುಕ್ಯ ದೊರೆ ಆರನೇ ವಿಕ್ರಮಾದಿತ್ಯನ ಅಧಿಕಾರಿಯಾದ ಗೋವಿಂದರಾಜ ದಂಡನಾಯಕನು ವಿಷ್ಣುವಿನ ಜಲಾಶಯನ ಮೂರ್ತಿಯನ್ನು ಕೆತ್ತಿಸಿದನು.[32] ಇದೇ ಶಾಸನದ ಆರಂಭದಲ್ಲಿ ಈ ಮೂರ್ತಿಯನ್ನು ಭೋಗಶಯನಮೂರ್ತಿಎಂದು ಉಲ್ಲೇಖಿಸಲಾಗಿದೆ. ಇದರಿಂದಾಗಿ ಶಿವಮೊಗ್ಗದಲ್ಲಿನ ಚಾಲುಕ್ಯರ ವೈಷ್ಣವ ಆಚರಣೆಯ ಕುರುಹನ್ನು ನೀಡುತ್ತದೆ.

ರಾಷ್ಟ್ರಕೂಟರ ಶಾಸನಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಒಟ್ಟು 712 ಶಾಸನಗಳಲ್ಲಿ ವೈಷ್ಣವ ಶಾಸನಗಳ ಸಂಖ್ಯೆ 44 ಆಗಿದ್ದು, ಶಾಸನೋಕ್ತ ವೈಷ್ಣವ ದೇವಾಲಯಗಳ ಸಂಖ್ಯೆ ಕಡಿಮೆಯಿದೆ. ಇವರ

ತಾಮ್ರಶಾಸನಗಳಲ್ಲೂ ವಿಷ್ಣು ದೇವಾಲಯವು ಉಲ್ಲೇಖವಾಗುವದಿಲ್ಲ. ಇದರಿಂದಾಗಿ ಇವರು ವೈಷ್ಣವಧರ್ಮಕ್ಕೆ ಹೆಚ್ಚಿನ ಒಲವನ್ನು ತೋರಿಸಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಕೇವಲ ಎರಡು ಶಾಸನಗಳು ವಿಷ್ಣುಸ್ತುತಿಯಿಂದ ಪ್ರಾರಂಭವಾಗುತ್ತವೆ. ಅವುಗಳೆಂದರೆ ಎರಡನೆಯ ಗೋವಿಂದನ ಅಲಾಸ್ ತಾಮ್ರಶಾಸನ 'ಸ್ವಸ್ತಿ ಸರ್ವೋವ್ಯಾದಹಾವಿಷ್ಣು ರಸೋ....' ಎಂಬ ಸಾಲಿನಿಂದ ಪ್ರಾರಂಭವಾದರೆ[33] ಕಳಸಶಾಸನ[34] 'ಜಯತ್ಯಾವಿಷ್ಕೃತಂ ವಿಷ್ಣರ್ದ್ವಾಹಾರಂ ಕೋಭಿತಾಂ...' ಎಂದು ಆರಂಭವಾಗುತ್ತದೆ. ಉಳಿದಂತೆ ವಿಷ್ಣುವನ್ನು ವಾಮನ,[35] ಕೃಷ್ಣ,[36] ವರಾಹ,[37] ಮಧರಿಪು,[38] ಕೇಶವ,[39] ಮುರಾರಿ,[40] ವೀರನಾರಾಯಣ[41] ಇತ್ಯಾದಿ ಅವನ ಅವತಾರಗಳ ರೂಪದಲ್ಲಿ ಸ್ತುತಿಸಲಾಗಿದೆ.

ಹೊಯ್ಸಳ ದೊರೆ ವಿಷ್ಣುವರ್ಧನನು ಈ ವೈಷ್ಣವ ಪಂಥವನ್ನು ಹೆಚ್ಚು ಪ್ರಸಿದ್ಧಿಗೆ ತಂದು ತನ್ನ ಸಾಮ್ರಾಜ್ಯದಲ್ಲಿ ವಿಸ್ತರಿದನು. ಶಿವಮೊಗ್ಗದ ಸೊರಬದ ಸಾ.ಶ.1117 ರ ಶಾಸನದಲ್ಲಿ ಈ ದೊರೆಯು ಹೊಂದಿರುವ ಬಿರುದಾದ **"**ವಾಸಂತಿಕ ದೇವಿಲೋಭಧ್ವವರ ಪ್ರಸಾದ**"**[42] ಎಂಬುದರಿಂದ ಈತ ಈ ಪಂಥಕ್ಕೆ ನೀಡಿದ ಕೊಡುಗೆ ಕುರಿತು ತಿಳಿದುಬರುತ್ತದೆ. ನಂತರದ ಬೇಲೂರಿನ ಶಾಸನ ದಾಖಲೆಯಲ್ಲಿ ಈ ವಿಷ್ಣುವರ್ಧನನ್ನು **"**ವಿಜಯನಾರಾಯಣ, ಶ್ರೀಮತ್ ಉಕುಂದ ಆಧರೋವಿಂದ ವಿನೋದ ವಂದನ ಮತ್ತು ಶ್ರೀ ಕೇಶವರ್ಧಕ**"** ಎಂದು ಕರೆಯಲಾಗಿದೆ.[43]

ವಿಜಯನಗರದ ಅರಸರುಗಳು ವೈಷ್ಣವ ಪಂಥಕ್ಕೆ ಈ ಶಿವಮೊಗ್ಗ ಪ್ರದೇಶದಲ್ಲಿ ಪ್ರೋತ್ಸಾಹ ನೀಡಿರುವ ಕುರಿತು ಸಾಕಷ್ಟು ಶಾಸನಾಧಾರಗಳು ಇವೆ. ಉದಾ: ಮೊದಲನೇ ಹರಿಹರನ ವೇವಪ್ಪ ದಂಡನಾಯಕನಿಗೆ ಕೊಲ್ಲಿನಘಟ್ಟ ಅಗ್ರಹಾರದ ಮಹಾಜನಗಳಿಂದ ಲಕ್ಷ್ಮೀ ನಾರಾಯಣ ದೇವರ ನಿತ್ಯಪೂಜೆಗೆಂದು ಅನುದಾನ ನೀಡಲಾಗಿದೆ.[44]

**ಕೊನೆಟಿಪ್ಪಣಿಗಳು**


1. Haridas Bhattacharya (Ed.), The Cultural Heritage of India, Volume – IV, The Ramakrishna Mission, Institute of Cultura, Culcutta, First Edition - 1937, Reprint - 2006, Page 1085 & 132
2. Ibid, Page 108
3. Ibid, Page 108
4. Ibid, Page 108
5. Ibid, Page 109
6. Hema Chandra Raychoudhuri, Materials for the study of the early History of the Vaishnava Sect, Oriental Books Reprint Corporation, New Delhi, Munshiram Manoharlal Publishers Pvt. Ltd., First Ed. 1920, Second Ed. 1975, Page 59.

7. Ibid, Page 59.

8. Ibid, Page 59.

9. ಪ್ರಧಾನ ಗುರುದತ್, 1990, ಶ್ರೀ ಕೃಷ್ಣ ಕಥೆಯ ಉಗಮ ಮತ್ತು ವಿಕಾಸ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪುಟ 24.

10. Hema Chandra Raychoudhari , Ibid, Page 68-69.

11. Report of the Archaeological Survey of India, Part II -1911-12; Director of General A.S. of I, New Delhi, reprint 2002, & Page 127. Epigraphia Indica, Vol XXIV. No.27, Page. 194.

12. Hema Chandra Raychoudhari, Ibid, Page 98.

13. Majumdar R.C. (Chief editor), 2012, The History and Culture of the Indian People Vol-III, Bharatiya Vidya Bhavan, Bangalore, Page 416-422.

14. ಪ್ರಧಾನ ಗುರುದತ್, ಶ್ರೀಕೃಷ್ಣ ಕಥೆಯ ಉಗಮ ಮತ್ತು ವಿಕಾಸ, ಪೂರ್ವೋಕ್ತ, ಪುಟ 29–30.

15. ರೈಸ್ ಬಿ.ಎಲ್, 1902, *ಎಪಿಗ್ರಾಫಿಯ ಕರ್ನಾಟಿಕ,* ಸಂಪುಟ–07, ಶಾಸನ ಸಂಖ್ಯೆ–07, ಶಿ79, ಸಾ.ಶ. 1516 ತಾಮ್ರಶಾಸನ

16. ಅದೇ ಸಂ–08, ತೀ196.

17. ಅದೇ. ತೀ. 181.

18. ಅದೇ.

19. Desai P.B., *A History of Karnataka*, p.58.

20. M.A.R, 1936, p.73.

21. ಪಾಡಿಗಾರ್ ಎಸ್.ವಿ, 1996, ವಿಷ್ಣು ಕಲ್ಟ್ ಇನ್ ಕರ್ನಾಟಕ, ಧಾರವಾಡ, ಪು.ಸಂ..41.

22. Gopal B.R., '*A New Kadamba Inscription ,Studies in Indian History and Culture*. Dharwad. 1971. pp.57-61.

23. M.A.R, 1925, p. 98.

24. Gopal B.R., '*Gudnapur Inscription of Kadamba Ravivarma' Srikanthika*, pp.61-72.

25. ರೈಸ್ ಬಿ.ಎಲ್,ಪೂರ್ವೋಕ್ತ, ಸಂ–05, ಬೇ245.

26. E.I.XIV, pp. 163.

27. ಪಾಡಿಗಾರ್ ಎಸ್.ವಿ, 1996, ವಿಷ್ಣು ಕಲ್ಟ್ ಇನ್ ಕರ್ನಾಟಕ, ಧಾರವಾಡ, ಪು.ಸಂ.45.

28. *Archaeological Survey of Mysore*, 1930, p.114
29. E.C. Vol. IX (old), Db, 67.
30. M A R, 1930, p.no.114.
31. M A R, 1912, p.62
32. ರೈಸ್ ಬಿ.ಎಲ್, ಪೂರ್ವೋಕ್ತ, ಸಂ–7 ಶಿ.137
33. E.I. Vol. VI. Pp. 208 ff:
34. ಗಂಗಾನಾಯಕ್ ಕೆ.ಎನ್,(ಪ್ರಧಾನ ಸಂಪಾದಕರು) ಭಾರತಿ ಬಿ.ಆರ್ (ಸಂಪಾದಕರು) 2011, ರಾಷ್ಟ್ರಕೂಟ ಶಾಸನಗಳು, ಸಂ–1, ಶಾ.ಸಂ.25.
35. ಅದೇ. .ಶಾ.ಸಂ.250.
36. ಅದೇ. ಶಾ.ಸಂ.109.
37. ಅದೇ. ಶಾ.ಸಂ.48.
38. ಅದೇ..ಶಾ.ಸಂ.347.
39. ಅದೇ..ಶಾ.ಸಂ–252.
40. ಅದೇ..ಶಾ.ಸಂ.252.
41. ಅದೇ..ಶಾ.ಸಂ.340.
42. ರೈಸ್ ಬಿ.ಎಲ್, ಪೂರ್ವೋಕ್ತ, ಸಂ–8 ಸೊ, 143
43. ರೈಸ್ ಬಿ.ಎಲ್, ಪೂರ್ವೋಕ್ತ, ಸಂ–5 ಬೆ, 71
44. ರೈಸ್ ಬಿ.ಎಲ್, ಪೂರ್ವೋಕ್ತ, ಸಂ–8 ಎಚ್87.

**ಪರಾಮರ್ಶನ ಗ್ರಂಥಗಳು**


- Chhabra B.CH. (Ed.) (1956). *Epigraphia Indica*, *Vol XXIV*. *Government of India press*, Culcatta.
- Gopal B.R., (1971). '*A New Kadamba Inscription ,Studies in Indian History and Culture*. Dharwad.
- Haridas Bhattacharya (Ed.), (2006), The culture Heritage of India –Volume – IV, The Religious Evolution of Religion-Philosophic culture in India, Majumdar R.C, The Ramakrishna Mission Institute of culture, Calcutta.
- Hema Chandra Raychaudhuri. (1975). Materials for the study of the early history of the vaishnava sect, oriental books reprint corporation, Delhi.

- Majumdar R.C. (Chief editor). (2012). The History and Culture of the Indian People. Bharatiya Vidya Bhavan, Bangalore.
- Report of the Archaeological Survey of India, Part II -1911-12; Director of General A.S. of I, New Delhi, reprint 2002.
- ಗಂಗಾನಾಯಕ್, ಕೆ.ಎನ್, (ಪ್ರ.ಸಂ.) ಭಾರತಿ ಬಿ.ಆರ್ (ಸಂ.) 2011, ರಾಷ್ಟ್ರಕೂಟ ಶಾಸನಗಳು.
- ಪಾಡಿಗಾರ್ ಎಸ್.ವಿ. (1996). *ವಿಷ್ಣು ಕಲ್ಟ್ ಇನ್ ಕರ್ನಾಟಕ.* ಧಾರವಾಡ.
- ಪ್ರಧಾನ ಗುರುದತ್. (1990). ಶ್ರೀ ಕೃಷ್ಣ ಉಗಮ ಮತ್ತು ವಿಕಾಸ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- ರೈಸ್ ಬಿ.ಎಲ್. (1902). *ಎಪಿಗ್ರಾಪಿಯ ಕರ್ನಾಟಿಕ,* ಸಂಪುಟ–07